158ನೇ ಮು ಉ SL.NO:-81 ದಿ:-23-03-2026

# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿಗೌಡ ರವರು ಶೂನ್ಯ ವೇಳೆ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಸರ್ಕಾರದ ಉತ್ತರ

**ವಿಷಯ:**

"ಡಂಪಿಂಗ್ ಯಾರ್ಡ್‌ಗೆ ಬೀಗ: ಕಸದ ಕಿರಿಕಿರಿ" ಎಂಬ ಶಿರೋನಾಮೆಯಡಿ ದಿನಾಂಕ: 17.03.2026 ರಂದು ರಾಜ್ಯದ ಪ್ರಮುಖ ಪತ್ರಿಕೆಯಾದ ವಿಜಯ ಕರ್ನಾಟಕದಲ್ಲಿ ವರದಿ ಮಾಡಲಾಗಿದೆ. ಬೇಗೂರಿನ ಡಂಪಿಂಗ್ ಯಾರ್ಡ್‌ಗೆ ಬೀಗ ಬಿದ್ದ ಬಳಿಕ ಸಮೀಪದ ಪ್ರದೇಶಗಳಲ್ಲಿ ಕಸ ವಿಲೇವಾರಿ ವ್ಯವಸ್ಥೆ ಅಸ್ತವ್ಯಸ್ಥವಾಗಿದೆ. ಡಂಪಿಂಗ್ ಯಾರ್ಡ್ ಪ್ರದೇಶದಲ್ಲಿ ಇತ್ತೀಚೆಗೆ ಬೆಂಕಿ ಅನಾಹುತ ಸಂಭವಿಸಿದ ಬಳಿಕ ಡಂಪಿಂಗ್ ಯಾರ್ಡ್‌ಗೆ ಬೀಗ ಹಾಕಲಾಗಿದೆ. ಸದರಿ ಡಂಪಿಂಗ್ ಯಾರ್ಡ್‌ನಲ್ಲಿ ಹಸಿ ಕಸ, ಒಣಕಸವನ್ನು ಪ್ರತ್ಯೇಕಿಸಲಾಗುತ್ತಿತ್ತು. ಬೆಂಕಿ ಅನಾಹುತದ ಬಳಿಕ ಕಸ ಪ್ರತ್ಯೇಕಿಸುವ ಕೆಲಸ ನಿಂತುಹೋಗಿದೆ. ಕಸ ಹೊತ್ತುತಂದ ರಿಕ್ಷಾಗಳು, ಲಾರಿಗಳು ಸಹ ಡಂಪಿಂಗ್ ಯಾರ್ಡ್ ಉದ್ದಕ್ಕೂ ನಿಂತಿವೆ. ಮನೆಗಳಿಂದ ಕಸ ಸಂಗ್ರಹ ವಿಲೇವಾರಿಯೂ ಸಮರ್ಪಕವಾಗಿ ಆಗುತ್ತಿಲ್ಲ. ಕಸ ಸಂಗ್ರಹಣೆ ಪ್ರದೇಶದಲ್ಲಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಸೊಳ್ಳೆ, ಕ್ರಿಮಿ–ಕೀಟಗಳ ಹಾವಳಿ ಹೆಚ್ಚಿದೆ. ದುರ್ನಾತ ಬೀರುತ್ತಿರುವ ಬಗ್ಗೆ ಅಲ್ಲಿನ ನಿವಾಸಿಗಳು ಸರ್ಕಾರಕ್ಕೆ ಹಿಡಿ ಶಾಪ ಹಾಕುತ್ತಿದ್ದಾರೆ. ರಾಜಧಾನಿ ಬೆಂಗಳೂರು ನಗರದಲ್ಲಿ ಕಸ ವಿಲೇವಾರಿ ಮಾಡುವುದೇ ದೊಡ್ಡ ಸಮಸ್ಯೆಯಾಗಿದೆ. ಸುಮಾರು 316 ಕೋಟಿ ರೂಗಳಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲೂ ದ್ವಿತೀಯ ಹಂತದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಿಸಲಾಗುತ್ತಿದೆ ಎಂದು ಸರ್ಕಾರ ಹೇಳಿದೆ. ಆದರೂ ಸಹ ಈ ಕೆಲಸವು ವ್ಯವಸ್ಥಿತವಾಗಿ ಸಮರ್ಪಕವಾಗಿ ಆಗದಿರುವುದು ಸಹ ಸಾರ್ವಜನಿಕರಿಂದ ದೂರುಗಳು ಕೇಳಿ ಬರುತ್ತಿವೆ. ನಗರದಲ್ಲಿ ಹೊಸದಾಗಿ ನಿರ್ಮಿಸುವ ಎಸ್.ಟಿ.ಎಸ್ ಗಳ ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ತಲಾ 100 ಎಕರೆಯಲ್ಲಿ 4 ದಿಕ್ಕುಗಳಲ್ಲಿ ಸಮಗ್ರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲಾಗುವುದು ಎಂದು ಸರ್ಕಾರ ಹೇಳಿಕೆ ನೀಡಿದೆ. ಬೆಂಗಳೂರು ನಗರದ ಕಸ ವಿಲೇವಾರಿ ಮಾಡಲು ಸಾವಿರಾರು ಕೋಟಿ ರೂಗಳನ್ನು ಖರ್ಚು ಮಾಡಿದರೂ ಸಹ ಯಾವುದೇ ರೀತಿಯ ಪ್ರಯೋಜನವಾಗಿಲ್ಲ. ಆದ್ದರಿಂದ ಬೆಂಗಳೂರು ನಗರದಲ್ಲಿ ಕಸ ವಿಲೇವಾರಿ ಮತ್ತು ಟ್ರಾಫಿಕ್‌ನ ಸಮಸ್ಯೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದನ್ನು ನಿಭಾಯಿಸಲು ಸರ್ಕಾರ ಸಮಗ್ರ ರೀತಿಯ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕು.

**ಉತ್ತರ:**

ದಿನಾಂಕ: 17.02.2026 ಹಾಗೂ 18.02.2026 ರಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಮಿಟ್ಟಗಾನಹಳ್ಳಿ/ಕಣ್ಣೂರು ಭೂಭರ್ತಿ ಘಟಕದ ಸುತ್ತಮುತ್ತಲಿನ ಗ್ರಾಮಸ್ಥರು ತಮ್ಮ ಪ್ರದೇಶಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆಗೊಳಿಸಲು ಹಾಗೂ ಕಾಮಗಾರಿಗಳನ್ನು ಕೈಗೊಳ್ಳಲು ಒತ್ತಾಯಿಸಿ ತ್ಯಾಜ್ಯ ವಿಲೇವಾರಿ ವಾಹನಗಳನ್ನು ತಡೆದು ಪ್ರತಿಭಟಿಸಿರುತ್ತಾರೆ. ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಸದರಿ ಕಸದ ವಿಲೇವಾರಿಯ ಸಮಸ್ಯೆಯನ್ನು ತುರ್ತಾಗಿ ಬಗೆಹರಿಸಲು ಸಾರ್ವಜನಿಕರ ಮನವೊಲಿಸಿ ಭೂಭರ್ತಿ ಘಟಕವನ್ನು ಪುನರಾರಂಭಿಸಲಾಗಿರುತ್ತದೆ. ಘಟಕವು ಸ್ಥಗಿತಗೊಂಡ ದಿನದಂದು ಹೆಚ್ಚಿನ ಪ್ರಮಾಣದಲ್ಲಿ ಹಸಿ ತ್ಯಾಜ್ಯವನ್ನು ವಿಂಗಡಿಸಿ 8 ಸಂಸ್ಕರಣಾ ಘಟಕಗಳಲ್ಲಿ ವಿಲೇವಾರಿ ಮಾಡಲು ಕ್ರಮ ವಹಿಸಲಾಗಿರುತ್ತದೆ.

. . .2.

ಭೂಭರ್ತಿ ಘಟಕ ಪುನರಾರಂಭಿಸಿದ ಬಳಿಕ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಿಲೇವಾರಿಯಾಗದೆ ಉಳಿದ ತ್ಯಾಜ್ಯವನ್ನು ದ್ವಿತೀಯ ಸಂಗ್ರಹಣಾ ವಾಹನಗಳಲ್ಲಿ (ಕಾಂಪ್ಯಾಕ್ಟರ್/ಕಂಟೈನರ್) ಹೆಚ್ಚುವರಿ ಟ್ರಿಪ್ ಮುಖೇನ ಸ್ವಚ್ಛಗೊಳಿಸಲು ಕ್ರಮವಹಿಸಲಾಗಿರುತ್ತದೆ. ಭೂಭರ್ತಿ ಘಟಕಕ್ಕೆ ವಿಲೇವಾರಿಯಾಗುತ್ತಿದ್ದ ಎಲ್‌ವಿಪಿ ತ್ಯಾಜ್ಯವನ್ನು ಸಿಮೆಂಟ್ ಕಾರ್ಖಾನೆಗಳಿಗೆ ವಿಲೇವಾರಿ ಮಾಡುವ ಮುಖೇನ ಭೂಭರ್ತಿ ಘಟಕಕ್ಕೆ ವಿಲೇವಾರಿ ಮಾಡುವ ವಾಹನಗಳ ಸಂಖ್ಯೆಗಳನ್ನು 350 ರಿಂದ 250 ಸಂಖ್ಯೆಗೆ ಗಣನೀಯವಾಗಿ ಕಡಿಮೆಗೊಳಿಸಲಾಗಿರುತ್ತದೆ. ಭೂಭರ್ತಿ ಘಟಕದ ಸುತ್ತಮುತ್ತಲಿನ ಪ್ರದೇಶಗಳಿಗೆ ಪ್ರತಿನಿತ್ಯವೂ ಲೆಮೆನ್‌ಗ್ರಾಸ್ ಸಿಂಪಡಣೆ ಮಾಡುತ್ತಿದ್ದು, ವಾಸನೆಯನ್ನು ತಡೆಗಟ್ಟಲು ಕ್ರಮವಹಿಸಲಾಗುತ್ತಿರುತ್ತದೆ. ಇದರೊಂದಿಗೆ ಜೈವಿಕ ಎನ್‌ಜೈಮ್ ಸಿಂಪಡಣೆ ಕೈಗೊಂಡು ಸೊಳ್ಳೆ, ಕ್ರಿಮಿ-ಕೀಟಗಳ ನಿಯಂತ್ರಣಕ್ಕಾಗಿ ಕ್ರಮವಹಿಸಲಾಗುತ್ತಿರುತ್ತದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 30 ದೊಡ್ಡ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಿಸಲು ಯೋಜಿಸಲಾಗಿದ್ದು, ಇದರಲ್ಲಿ ಪ್ರಸ್ತುತ 3 ಘಟಕಗಳು ಸ್ಥಾಪನೆಯಾಗಿದ್ದು, ವೈಜ್ಞಾನಿಕವಾಗಿ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗುತ್ತಿರುತ್ತದೆ. ಉಳಿದಂತೆ 1 ಘಟಕ ನಿರ್ಮಾಣ ಮುಕ್ತಾಯ ಹಂತದಲ್ಲಿದ್ದು, 3 ಘಟಕ ಪ್ರಾರಂಭಿಕ ಹಂತದಲ್ಲಿದ್ದು, ಉಳಿದ 23 ಘಟಕಗಳ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ದೊಡ್ಡ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನಗಳ ಸ್ಥಾಪನೆಯಿಂದಾಗಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಪ್ರಾಥಮಿಕ ವಾಹನಗಳಿಂದ ದ್ವಿತೀಯ ಹಂತದ ವಿಲೇವಾರಿ ವಾಹನಗಳಿಗೆ ವರ್ಗಾವಣೆ ಮಾಡಲಾಗುತ್ತಿದ್ದು, ಇದರಿಂದ ವಾರ್ಡ್‌ಗಳಲ್ಲಿ ಬ್ಲಾಕ್ ಸ್ಪಾಟ್ ಸಮಸ್ಯೆಯು ಕಡಿಮೆಯಾಗುತ್ತಿರುತ್ತದೆ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಘನತ್ಯಾಜ್ಯದ ಪರಿಮಾಣ ಹಾಗೂ ಅದರ ನಿರ್ವಹಣೆಯನ್ನು ವ್ಯವಸ್ಥಿತವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಸರ್ಕಾರವು ಮುಂದಿನ 30 ವರ್ಷಗಳ ಅವಧಿಗೆ ಸಮಗ್ರ ತ್ಯಾಜ್ಯ ನಿರ್ವಹಣೆಯನ್ನು ರೂಪಿಸಿದ್ದು, ಪ್ರಸ್ತುತ ಸದರಿ ಟೆಂಡರ್ ಪ್ರಕ್ರಿಯೆಯು ಆರ್ಥಿಕ ಮೌಲ್ಯಮಾಪನ ಹಂತದಲ್ಲಿರುತ್ತದೆ.

ಬೆಂಗಳೂರು ನಗರದಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ನಿರ್ವಹಣೆ ಮತ್ತು ಸಂಸ್ಕರಣೆಗೆ ಈಗಾಗಲೇ ಯೋಜನೆಗಳನ್ನು ರೂಪಿಸಲಾಗಿದ್ದು, ಸದರಿ ಯೋಜನೆಗಳ ಅನುಷ್ಠಾನಕ್ಕೆ ಕ್ರಮವಹಿಸಲಾಗುತ್ತಿರುತ್ತದೆ.

**ನಅಇ 294 ಎಂಎಸ್‌ವೈ 2026**

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ